**1499 (1664) ಶ್ರೀ ಎಸ್ ರಾಜೇಂದ್ರನ್ (ಕೆ ಜಿ ಎಫ್)** .– ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ ಜಿ ಎಫ್ ಜನತೆ ಅದರಲ್ಲೂ ನಿರ್ದಿಷ್ಟವಾಗಿ ಗಣಿ ಪ್ರದೇಶ ಜನತೆ ಸ್ವಚ್ಛವಲ್ಲದ ಹಾಗೂ ಕೆಟ್ಟ ಸ್ಥಿತಿಯಲ್ಲಿನ ಶೌಚಾಲಯಗಳನ್ನು ಉಪಯೋಗಿಸುತ್ತಿರುವುದು ನಿಜವೇ,

ಆ) ಹಾಗಿದ್ದಲ್ಲಿ ಅಂತಹ ಶೌಚಾಲಯಗಳನ್ನು ನಾಶಪಡಿಸಿ ಸದರಿ ಜನರಿಗೆ ಹೊಸ ಶೌಚಾಲಯಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

**ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯ ಮಂತ್ರಿಯವರು)**

ಅ) ಹೌದು

ಆ) ಪ್ರತಿ ಶೌಚಾಲಯಕ್ಕೆ ರೂ 8 96 ಲಕ್ಷಗಳಂತೆ ಈ ಕೆಳಕಂಡ ನಾಲ್ಕು ಜಾಗಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ

1 ಕೆನ್ನಡೀಸ್ II ನೇ ಲೈನ್

2 ಎಸ್ ಟಿ ಬ್ಲಾಕ್

3 ನಾರ್ತ್ ಟ್ಯಾಂಕ್ ಬ್ಲಾಕ್

4 ಕೆ ಎನ್ ಜೆ ಎಸ್ ಬ್ಲಾಕ್

ಪ್ರತಿ ಶೌಚಾಲಯದಲ್ಲಿ 10 ಮಹಿಳೆಯರಿಗೆ ಮತ್ತು 10 ಪುರುಷರಿಗೆ ಬ್ಲಾಕ್‌ಗಳಿದ್ದು, ನಿರಂತರ ನೀರು ಸರಬರಾಜು, ವಿದ್ಯುಚ್ಛಕ್ತಿ ಮತ್ತು ನಿರ್ವಹಣೆಯ ಸೌಲಭ್ಯಗಳಿರುತ್ತದೆ

ನಗರಸಭೆಯಿಂದ ಅವಶ್ಯವಿರುವ ಕಡೆ ಸಾರ್ವಜನಿಕ ಶೌಚಾಲಯಗಳನ್ನು ಹಂತ ಹಂತವಾಗಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು

**1500 (1665) ಶ್ರೀ ರಾಜೇಂದ್ರನ್ ಎಸ್ (ಕೆ ಜಿ ಎಫ್)** – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ ಜಿ ಎಫ್ ನಗರಾಭಿವೃದ್ಧಿ ಪ್ರಾಧಿಕಾರದಿಂದ ಇದುವರೆವಿಗೂ ನಿರ್ಮಿಸಿರುವ ಬಡಾವಣೆಗಳ ಸಂಖ್ಯೆ ಎಷ್ಟು (ಬಡಾವಣೆಗಳ ವಿವರ ನೀಡುವುದು),